ಮೇಲ್ಕಾಗಿ ಕೃಷಿ ವಿಜ್ಞಾನ ಕೇಂದ್ರಕ್ಕೆ ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನೂರಕ್ಕೆ ನೂರರಷ್ಟು ಅನುದಾನವನ್ನು ನೀಡುತ್ತಿದೆ. ಆದರೆ ವಿಸ್ತರಣಾ ಶಿಕ್ಷಣ ಘಟಕ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಅಲ್ಪ ಸ್ವಲ್ಪ ಅನುದಾನದ ಮೇಲೆ ಅವಲಂಬಿತವಾಗಿದೆ. ಇದಲ್ಲದೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಕೊಡಗು, ದಾವಣಗೆರೆ, ಮೈಸೂರು ಹಾಗೂ ಬೆಂಗಳೂರು ನಗರ ಜಿಲ್ಲೆಗಳಲ್ಲಿ ಈ ಕೃಷಿ ವಿಜ್ಞಾನ ಕೇಂದ್ರಗಳನ್ನು ಹೊಂದಿಲ್ಲದಿರುವ ಕಾರಣ ಈ ವಿಸ್ತರಣಾ ಶಿಕ್ಷಣ ಘಟಕವನ್ನು ಈ ಮೇಲೆ ತಿಳಿಸಿದ ಯಾವುದಾದರೊಂದು ಜಿಲ್ಲೆಗೆ ಸ್ಥಳಾಂತರಿಸುವ ನಿರ್ಣಯ ತೆಗೆದುಕೊಳ್ಳಲಾಗಿದೆ.

ಇ) ಉದ್ಭವಿಸುವುದಿಲ್ಲ.

ಅನುಬಂಧ (II)

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಿರುವ ಉತ್ತರಗಳು.

346 (794) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ಕ್ಷೇತ್ರದ ಕಲ್ಲಮಂಡ್ಕೂರು ಗ್ರಾಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಯ ರಸ್ತೆಗಳನ್ನು ರಿಪೇರಿ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ರಿಪೇರಿಗೊಳಿಸದಿರಲು ಕಾರಣವೇನು; ಯಾವಾಗ ರಿಪೇರಿ ಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.

ಹೌದು.

ಸಮಾಜ ಕಲ್ಯಾಣ ಇಲಾಖೆ

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ಕ್ಷೇತ್ರದ ಕಲ್ಲಮಂಡ್ಕೂರು ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯ ರಸ್ತೆಗಳನ್ನು ರಿಪೇರಿ ಮಾಡಲು ಯಾವುದೇ ಪ್ರಸ್ತಾವನೆಯನ್ನು ಈ ಇಲಾಖೆಗೆ ಸಲ್ಲಿಸಿರುವುದಿಲ್ಲ.

ಆ) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.

ದಕ್ಷಿಣ ಕನ್ನಡ ಜಿಲ್ಲೆ ಮೂಡಬಿದ್ರೆ ಕ್ಷೇತ್ರದ ಕಲ್ಲಮಂಡ್ಕೂರು ಗ್ರಾಮದ ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ 19.78 ಲಕ್ಷ ರೂ.ಗಳನ್ನು ಮಂಜೂರು ಮಾಡಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ ಇವರು ಸಲ್ಲಿಸಿರುವ ಕೆಳಕಂಡ ಅಂದಾಜು ಪಟ್ಟಿಗಳಿಗೆ ದಿನಾಂಕ: 6–6–2006ರಂದು ಆಡಳಿತಾತ್ಮಕ ಮಂಜೂರಾತಿ ನೀಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಮೊತ್ತ (ಲಕ್ಷ) ರೂ.ಗಳು)
1.	ಕಲ್ಲಮಂಡ್ಕೂರು ಗ್ರಾಮ ತೊಡಂಕಿಲದಿಂದ ಕಳಸಬೈಲು ಗಿರಿಜನ ಕಾಲೋನಿ ರಸ್ತೆಗೆ ಜಲ್ಲಿ ಹಾಕಿಸುವುದು.	3.00
2.	ಕಲ್ಲಮುಂಡ್ಕೂರು ಗ್ರಾಮ ಬಾಣಂಗಡಿಯಿಂದ ಕುಂಬಿಲಪಲ್ಕೆ ಕೊರಗ ಕಾಲೋನಿ ರಸ್ತೆಗೆ ಜಲ್ಲಿ ಮತ್ತು ಡಾಂಬರೀಕರಣ	2.50
3.	ಕಲ್ಲಮಂಡ್ಕೂರು ಗ್ರಾಮ ಮಾಳದಬೆಟ್ಟು ವಿನಿಂದ ನಡುಗುಡ್ಡೆ ಕೊರಗ ಕಾಲೋನಿ ರಸ್ತೆಗೆ ಜಲ್ಲಿ ಮತ್ತು ಡಾಂಬರೀಕರಣ	2.00
4.	ಕಲ್ಲಮುಂಡ್ಕೂರು ಗ್ರಾಮ ತೊಡಂಕಿಲದಿಂದ ಕಳಸಬೈಲು ಗಿರಿಜನ ಕಾಲೋನಿ ರಸ್ತೆಗೆ ಡಾಂಬರೀಕರಣ.	4.00
5.	ಕಲ್ಲಮಂಡ್ಕೂರು ಗ್ರಾಮ ಕುದ್ರಿಪದವುನಿಂದ ಓಣಿ ಜಲ್ಲಿ ಮತ್ತು ಡಾಂಬರೀಕರಣ.	5.00
6.	ಕಲ್ಲಮಂಡ್ಕೂರು ಗ್ರಾಮ ಶೆಟ್ಟಿಗುಡ್ಡೆಯಿಂದ ನೆಕ್ಕರೆ ಗಿರಿಜನ ಕಾಲೋನಿ ರಸ್ತೆಗೆ ಜಲ್ಲಿ ಮತ್ತು ಡಾಂಬರೀಕರಣ	3.28
	ಒಟ್ಟು	**19.78**

ಸಮಾಜ ಕಲ್ಯಾಣ ಇಲಾಖೆ
ಅನ್ವಯಿಸುವುದಿಲ್ಲ.

547 (784) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕ್ಷಣ ಇಲಾಖೆಯ ಮೂಲ್ಕಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕಳೆದ 7 ವರ್ಷಗಳಿಂದ ಶೇ 100 ಫಲಿತಾಂಶ ಬರುತ್ತಿದ್ದರೂ ಇದುವರೆವಿಗೂ ಈ ಶಾಲೆಗೆ 1 ಶಾಶ್ವತ ಕಟ್ಟಡ ಹಾಗೂ ಪ್ರಾಂಶುಪಾಲರ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದರಿಂದ ಇದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಶಿಕ್ಷಣ ಇಲಾಖೆಯ ಮೂಲ್ಕಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶಾಶ್ವತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮೂಲ್ಕಿ ನಗರದಿಂದ 11 ಕಿ.ಮೀ. ದೂರದಲ್ಲಿರುವ